ಸಿ.ಸಿ. ನಂ:229-2023

ಚಾ.ಸಾ : 1

ಪ್ರಾ.ಸಾ : 1

ಪ್ರಮಾಣ ವಚನ ಭೋದಿಸಿದ ದಿನಾಂಕ :13-05-2025

**ಪಾಟೀ ಸವಾಲುಃ ಶ್ರೀಯುತ** ಎಮ್ ಪಿ ಕೆ **ವಕೀಲರಿಂದಃ** ಆರೋಪಿತರ ಪರಃ

ನನ್ನ ಮನೆಯಲ್ಲಿ ನನ್ನ ತಾಯಿ, ಹೆಂಡತಿ ಹಾಗೂ ಮಗ ಇರುತ್ತಾರೆ. ಘಟನೆ ನಡೆಯಲಾಯಿತು ಎನ್ನುವ ಸಮಯದಲ್ಲಿ ನನ್ನ ಮನೆಯಲ್ಲಿ ನಾನು ಮತ್ತು ನನ್ನ ತಾಯಿ ಮಾತ್ರ ಇದ್ದೆವು. ನಾನು ಸುಮಾರು 25 ವರ್ಷಗಳಿಂದ ಕಾರನ್ನು ಉಪಯೋಗಿಸುತ್ತಿದ್ದೇನೆ. ನನ್ನ ಹತ್ತಿರ ಮೊದಲು ಲಾರಿ ಇತ್ತು. ಆರೋಪಿತರು ಬಂದಾಗ ನಮ್ಮ ಮನೆಯಲ್ಲಿ ಕೆಲಸ ಮಾಡುವವರು ನಮ್ಮ ಮನೆಯಿಂದ ಸುಮಾರು 15 ಮೀಟರ್ ದೂರದಲ್ಲಿ ಕೆಲಸ ಮಾಡುತ್ತಿದ್ದರು.

2. 1 ನೇ ಆರೋಪಿಯ ಹೆಂಡತಿಗೆ ನಾನು ಒಂದು ಮನೆ ಕಟ್ಟಿಕೊಡಬೇಕಾಗಿದ್ದು ಅದನ್ನು ಕಟ್ಟಿಕೊಟ್ಟಿದ್ದೆನು. ನಾನು 1 ನೇ ಆರೋಪಿಯ ತೋಟವನ್ನು ಲೀಸ್ಗೆ ಪಡೆದಿದ್ದೆನು. ಲೀಸ್ ನ ಬಾಬ್ತಿನ ಹಣದಲ್ಲಿ 1 ನೇ ಆರೋಪಿಗೆ ಮನೆ ಕಟ್ಟಿಕೊಡಲು ಮಾತಾಗಿತ್ತು. ಲೀಸ್ ನಲ್ಲಿ ಬಂದ ಮೊತ್ತದಲ್ಲಿ ಮನೆ ಕಟ್ಟಿಕೊಡಲಿಲ್ಲ ಎಂದು ನನ್ನ ವಿರುದ್ಧ ಕಾಸರಗೋಡಿನ ಕಾಣುತ್ತೂರು ಎಂಬ ದೈವಸ್ಥಾನದಲ್ಲಿ ದೂರನ್ನು 1 ನೇ ಆರೋಪಿ ಕೊಟ್ಟಿದ್ದರು. ಸದರಿ ದೈವಸ್ಥಾನಕ್ಕೆ ನಾನು ಹೋಗಿ 1 ನೇ ಆರೋಪಿಗೆ ನಾನು ಮೊತ್ತವನ್ನು ಕೊಡುವುದಿದೆ ಎಂದು ಒಪ್ಪಿಕೊಂಡಿಲ್ಲ. ಕಾಣುತ್ತೂರು ಎಂಬ ದೈವಸ್ಥಾನದಿಂದ ನನಗೆ ಒಂದು ಬಾರಿ ನೋಟೀಸ್ ಬಂದಿದೆ. ನೋಟೀಸ್ ಬಂದ ನಂತರ ನಾನು ದೈವಸ್ಥಾನಕ್ಕೆ ಹೋಗಿ ಹಾಜರಾಗಿದ್ದೇನೆ. ನಾನು ಹಾಜರಾದ ನಂತರ ದೈವಸ್ಥಾನದಲ್ಲಿ ಏನು ವ್ಯವಹರಣೆ ನಡೆಯಿತು ಎನ್ನುವ ಬಗ್ಗೆ ನನ್ನ ಹತ್ತಿರ ದಾಖಲೆ ಇರುವುದಿಲ್ಲ. ಕಾಣುತ್ತೂರು ದೈವಸ್ಥಾನ ಅಥವಾ ಬೇರೆ ಯಾವುದೇ ದೈವಸ್ಥಾನದಲ್ಲಿ 1 ನೇ ಆರೋಪಿಗೆ ನಾನು ಯಾವುದೇ ಹಣ ಕೊಡಬೇಕಾಗಿಲ್ಲ ಎಂದು ದೂರು ನೀಡಿಲ್ಲ.

3. 1 ನೇ ಆರೋಪಿಯ ಹೆಂಡತಿ ನನ್ನ ವಿರುದ್ಧ ಗ್ರಾಹಕರ ವೇದಿಕೆಯಲ್ಲಿ ದೂರು ಸಲ್ಲಿಸಿದ್ದನ್ನು ವಾಪಸ್ಸು ಪಡೆಯಬೇಕು ಎನ್ನುವ ಬಗ್ಗೆ ಕಾಣುತ್ತೂರು ದೈವಸ್ಥಾನದಲ್ಲಿ

ಮಾತುಕತೆ ಆಗಲಿಲ್ಲ. ಗ್ರಾಹಕರ ವೇದಿಕೆಯಲ್ಲಿ 1 ನೇ ಆರೋಪಿಯ ಹೆಂಡತಿಯ ತಪ್ಪು ಎಂದು ಆದೇಶ ಮಾಡಿರುವ ಬಗ್ಗೆ ಆದೇಶದ ಪ್ರತಿ ನನ್ನ ಹತ್ತಿರ ಇದೆಯೋ ಅಥವಾ ಇಲ್ಲವೋ ಎಂಬ ಬಗ್ಗೆ ಪರಿಶೀಲಿಸಬೇಕು.

**4.** ಆರೋಪಿತರು ನಮ್ಮ ಮನೆಗೆ ಬಂದ ಕಾರಣ ಸುಮಾರು **25-30** ನಿಮಿಷಗಳ ಕಾಲ ಮನೆಯ ಒಳಗಡೆ ಇದ್ದರು. ನಮ್ಮ ಮನೆಯ ಅಕ್ಕಪಕ್ಕ ಸುಮಾರು **100** ಮೀಟರ್ ಗಳ ಅಂತರದಲ್ಲಿ ನಮ್ಮ ಸಂಬಂಧಿಕರಿಗೆ ಸೇರಿದ ಮನೆಗಳಿರುತ್ತವೆ. ಆರೋಪಿತರು ಅಲ್ಲಿ ಬಂದು ಮಾತುಕತೆ ಮಾಡಿದ ಸಮಯದಲ್ಲಿ ನಮ್ಮ ಸಂಬಂಧಿಕರು ಯಾರೂ ಅಲ್ಲಿಗೆ ಬರಲಿಲ್ಲ. ನನ್ನ ದೂರಿನಲ್ಲಿ ಇನ್ನೋವಾ ಕಾರ್ ಬಗ್ಗೆ ನಮೂದು ಮಾಡಿದ್ದೇನೆ. ನಮ್ಮ ಮನೆಯಿಂದ ಪೋ.ಠಾಣೆಗೆ ಸುಮಾರು **8-9** ಕಿ ಮೀ ಅಂತರವಿದೆ. ನಾನು ದೂರು ಕೊಡುವಾಗ ಸಂಜೆ ಸುಮಾರು **7.00** ಗಂಟೆ ಆಗಿತ್ತು. ಆರೋಪಿತರು ಬಂದು ಗಲಾಟೆ ಮಾಡಿದ್ದಾರೆ ಎನ್ನುವ ಸಮಯದಲ್ಲೇ ಪೋ.ಠಾಣೆಗೆ ಫೋನ್ ಮಾಡಿ ಮಾಹಿತಿ ಕೊಡಲು ತೊಂದರೆಯಿತ್ತಾ ಎನ್ನುವ ಪ್ರಶೆಗೆ ಸಾಕ್ಷಿಯು ನನ್ನ ತಾಯಿಯಿದ್ದ ಕಾರಣ ಏನು ಮಾಡಬೇಕೆಂದು ಗೊತ್ತಾಗಲಿಲ್ಲ ಎಂದು ನುಡಿಯುತ್ತಾರೆ.

**5.** ಗಲಾಟೆ ಆಯಿತು ಎನ್ನುವ ಕಾಲದಲ್ಲಿ ನನ್ನ ಮಗನಿಗೆ ಹಾಗೂ ನನ್ನ ತಮ್ಮನಿಗೆ ಫೋನ್ ಮಾಡಿ ವಿಷಯ ತಿಳಿಸಲು ಪ್ರಯತ್ನಿಸಿದೆನು. ಚಾಸಾ-**2** ಮತ್ತು **3** ರವರು ಮನೆಯ ಹತ್ತಿರ ಬಂದಾಗ ನಾನು ಮನೆಯ ಜಗುಲಿಯಲ್ಲಿ ನಿಂತಿದ್ದೆನು.

**6.** ನಾನು ದೂರು ಕೊಟ್ಟ ನಂತರ ಪೋಲೀಸರು ಮಾರನೆಯ ದಿವಸ ನನ್ನನ್ನು ವಿಚಾರಣೆ ಮಾಡಿದ್ದಾರೆ. ಒಂದು ಬಾರಿ ಪೊಲೀಸರು ಮನೆಯಲ್ಲಿ ಹಾಗೂ ಇನ್ನೊಂದು ಬಾರಿ ಪೋ.ಠಾಣೆಯಲ್ಲಿ ವಿಚಾರಣೆ ಮಾಡಿದ್ದಾರೆ. ದೂರು ಕೊಟ್ಟ ಮಾರನೆಯ ದಿನ ಬೆಳಗ್ಗೆ 10.00 ಗಂಟೆ ಸಮಯದಲ್ಲಿ ಪೊಲೀಸರು ಮನೆಗೆ ಬಂದಿರುತ್ತಾರೆ. ಪೊಲೀಸರು ಬೆಳಗ್ಗೆ 10.00 ರಿಂದ 12.00 ಗಂಟೆಯವರೆಗೆ ಮನೆಯಲ್ಲಿದ್ದರು.

**7.** ಗಲಾಟೆಯ ಸಂಬಂಧ ಸಂಜೆ ನನ್ನ ಮಗನಿಗೆ ವಿಚಾರ ತಿಳಿಸಿದ್ದು ಆತ ಮರುದಿನ ಪೊಲೀಸರು ಬಂದಾಗ ಮನೆಯಲ್ಲಿ ಇದ್ದನು. ಪೊಲೀಸರು ಗಲಾಟೆ ಸಂಬಂಧ ನನ್ನ ಮಗ ಮತ್ತು ಹೆಂಡತಿಯನ್ನು ವಿಚಾರಣೆ ಮಾಡಿಲ್ಲ. ಚಾಸಾ-5 ಮತ್ತು 6 ರವರು ನಮ್ಮ ಮನೆಯಲ್ಲಿ ಕೆಲಸ ಮಾಡುವವರು. ಚಾಸಾ-4 ನನ್ನ ಚಿಕ್ಕಪ್ಪನ ಮಗ. 1 ನೇ ಆರೋಪಿಯನ್ನು ಹೊರತುಪಡಿಸಿ ಬೇರೆ ಆರೋಪಿತರ ಹೆಸರು ಮತ್ತು ಪರಿಚಯ ನನಗೆ ಇಲ್ಲ.

ನಾನು ಲೀಸ್ ನಲ್ಲಿ ಒಪ್ಪಿಕೊಂಡಂತೆ 1 ನೇ ಆರೋಪಿಯ ಹೆಂಡತಿಗೆ ಮನೆಯನ್ನು ಕಟ್ಟಿಕೊಟ್ಟಿಲ್ಲ ಎಂದರೆ ಸರಿಯಲ್ಲ. ಲೀಸ್ ನಿಂದ ಪಡೆದ ಮೊತ್ತವನ್ನು ನಾನು 1 ನೇ ಆರೋಪಿಗೆ ಕೊಡಬೇಕು ಎಂದು ಕಾಣತ್ತೂರು ದೈವಸ್ಥಾನದಲ್ಲಿ 1 ನೇ ಆರೋಪಿ ದೂರು ನೀಡಿದ್ದರು ಎಂದರೆ ಸರಿ. ಸದರಿ ದೈವಸ್ಥಾನದಲ್ಲಿ ಟ್ರಸ್ಟಿಯಾದ ಮಾಧವ ನಾಯರ್ ಎನ್ನುವವರು 1 ನೇ ಆರೋಪಿಗೆ ನಾನು 6 ಲಕ್ಷ ರೂ. ಕೊಡಬೇಕು ಎಂದು ಹೇಳಿದ್ದು ಅದಕ್ಕೆ ನಾನು ಒಪ್ಪಿದ್ದೆನು ಎಂದರೆ ಸುಳ್ಳು. 6 ಲಕ್ಷ ರೂ. ಗಳನ್ನು ದಿ.20-12-2017 ರ ಮೊದಲು ಕಾಣತ್ತೂರು ದೈವಸ್ಥಾನಕ್ಕೆ ತಂದು ಕೊಡಬೇಕು ಹಾಗೂ ಆ ರೀತಿ ಹಣ ಕೊಟ್ಟ ನಂತರ 1 ನೇ ಆರೋಪಿಯ ಹೆಂಡತಿ ನನ್ನ ವಿರುದ್ಧ ಗ್ರಾಹಕರ ವೇದಿಕೆಯಲ್ಲಿ ದಾಖಲಿಸಿದ್ದ ದೂರನ್ನು ವಾಪಸ್ಸು ಪಡೆಯಬೇಕು ಎಂದು ತೀರ್ಮಾನವಾಗಿತ್ತು ಎಂದರೆ ಸುಳ್ಳು. ಆದ ಮಾತಿನಂತೆ ದಿ.20-11-2017 ರಂದು 1 ನೇ ಆರೋಪಿಯ ಹೆಂಡತಿ ನನ್ನ ವಿರುದ್ಧ ಗ್ರಾಹಕರ ವೇದಿಕೆಯಲ್ಲಿ ದಾಖಲಿಸಿದ್ದ ದೂರನ್ನು ವಾಪಸ್ಸು ಪಡೆದು ಕಾಣತ್ತೂರು ದೈವಸ್ಥಾನಕ್ಕೆ ಹಾಜರಾದರು, ಆದರೆ ನಾನು ಒಪ್ಪಿದ ಮಾತಿನಂತೆ ಹಣವನ್ನು ಕೊಡಲು ದೈವಸ್ಥಾನಕ್ಕೆ ಬರಲಿಲ್ಲ ಎಂದರೆ ಸರಿಯಲ್ಲ.

8. 1 ನೇ ಆರೋಪಿಗೆ ನಾನು ಪದೇ ಪದೇ ಲಾರಿ ಹತ್ತಿಸಿ ಪ್ರಾಣ ತೆಗೆಯುತ್ತೇನೆ ಎಂದು ಬೆದರಿಕೆ ಹಾಕುತ್ತಿದ್ದೆ ಎಂದರೆ ಸುಳ್ಳು. ನಾನು ಹೇಳಿದಂತೆ ಆರೋಪಿತರು ನನ್ನ ಮನೆಗೆ ಬಂದು ಗಲಾಟೆ ಮಾಡಿಲ್ಲ ಎಂದರೆ ಸರಿಯಲ್ಲ. 1 ನೇ ಆರೋಪಿಗೆ ನಾನು ಹಣ ಕೊಡಬೇಕಾಗುತತದೆ ಎನ್ನುವ ಕಾರಣದಿಂದ ದೂರನ್ನು ಅವರ ವಿರುದ್ಧ ನೀಡಿದ್ದೇನೆಂದರೆ ಸರಿಯಲ್ಲ. ಘಟನೆ ನಡೆಯದಿದ್ದ ಕಾರಣ ಕಾರುಗಳ ತಪ್ಪು ಹೆಸರನ್ನು ದೂರಿನಲ್ಲಿ ನಮೂದಿಸಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರು ನನ್ನ ಮನಗೆ ಬಂದಿಲ್ಲ ಹಾಗೂ ಮಹಜರು ಕೂಡಾ ಮಾಡಿಲ್ಲ ಎಂದರೆ ಸರಿಯಲ್ಲ. ಸುಳ್ಳು ದೂರನ್ನು ನೀಡಿ ಅದಕ್ಕೆ ಪೂರಕವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

ನನ್ನ ಉಕ್ತಲೇಖನದ ರೀತ್ಯ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ.ಇದೆ.

ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು,
ಮತ್ತು ಜೆಎಂಎಫ್‌ಸಿ, ಪುತ್ತೂರು,ದ.ಕ.